**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕಃ 14-08-2019

**ಮುಖ್ಯ ವಿಚಾರಣೆಃ-** ಶ್ರೀ ಜಿ.ಎನ್.ಆರ್ ಪ್ರತಿವಾದಿಯ ಪರ ವಕೀಲರಿಂದ

1,2 ನೇ ಪ್ರತಿವಾದಿ ಹಾಗೂ ಮೃತ ಅಶೋಕ್ ರವರ ಮಧ್ಯೆ ಆದ ಪಾಲುಪಟ್ಟಿಗೆ ನಾನು ಪತ್ರಬರಹಗಾರನಾಗಿ ಸಹಿ ಮಾಡಿದ್ದೇನೆ ಸದರಿ ದಾಖಲೆಯನ್ನು ಈಗಾಗಲೇ ನಿಡಿ-87 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಡಿ-87(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ.ಎಸ್.ಡಿ ವಾದಿಯ ಪರ ವಕೀಲರಿಂದ**

ನನ್ನ ಸ್ವಂತ ಊರು ದಿಂಡಗೂರು. ನಮ್ಮ ಗ್ರಾಮ ಚನ್ನರಾಯಪಟ್ಟಣದಿಂದ 7 ಕೀ.ಮೀಟರ್ ಅಂತರದಲ್ಲಿದೆ. 1988-89 ರಲ್ಲಿ ಪತ್ರಬರಹಗಾರ ಪರವಾನೆಗೆ ಪಡೆದಿದ್ದೇನೆ ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯ ಪಕ್ಕದಲ್ಲಿ ಕೆಲಸ ಮಾಡುತ್ತೇನೆ. ನುಗ್ಗೇಹಳ್ಳಿ ಉಪನೊಂದಾಣಿ ಅಧಿಕಾರಿಗಳ ಕಚೇರಿಗೂ ದಾಖಲೆ ತಯಾರಿಸಲು ಹೋಗುತ್ತೇನೆ. ನೋಂದಣಿ ದಾಖಲೆಗಳ ಕುರಿತು ಮಾತ್ರ ರಿಜಿಸ್ಟರ್ ನಲ್ಲಿ ನಮೂದಿಸುತ್ತೇನೆ ನಿಡಿ-87 ದಾಖಲೆಯನ್ನು ಕೋತ್ತನಹಳ್ಳಿ ಗ್ರಾಮದಲ್ಲಿ 1 ನೇ ಪ್ರತಿವಾದಿಯ ಮನೆಯ ಮುಂದಿರುವ ಜಗಲಿಯ ಮೇಲೆ ಬರೆದಿದ್ದೇನೆ. 1 ನೇ ಪ್ರತಿವಾದಿಯ ಮನೆಯ ಬಾಗಿಲು ಯಾವ ದಿಕ್ಕಿಗೆ ಇದೆ ಎಂಬುದು ಗೊತ್ತಿಲ್ಲ. ಗ್ರಾಮದ ಯಾವ ದಿಕ್ಕಿಗೆ 1 ನೇ ಪ್ರತಿವಾದಿಯ ಮನೆ ಇದೆ ಎಂಬುದು ಗೊತ್ತಿಲ್ಲ. ಅದು ಮಂಗಳೂರು ಹಂಚಿನ ಮನೆ. ಬೆಸಿಗೆಯ ಕಾಲದಲ್ಲಿ ದಾಖಲೆ ತಯಾರಿಸಿರಬಹುದು, ಈಗ ನೆನಪಿಲ್ಲ. ದಾಖಲೆ ತಯಾರಿಸಲು ಬರುವಂತೆ 2 ದಿನ ಮುಂಚೆಯೇ 1 ನೇ ಪ್ರತಿವಾದಿ ತಿಳಿಸಿದ್ದರು. ಆಗ 1 ನೇ ಪ್ರತಿವಾದಿಗೆ 50-60 ವರ್ಷ ವಯಸು ಆಗಿತ್ತು. ಬಿಳಿ ಹಳೆಯ ಮೇಲೆ ಬರೆಯಲಾಗಿದೆ. ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯವರೆಗೆ ದಾಖಲೆ ತಯಾರಿಸಿದ್ದೇನೆ. ಸದರಿ ಪಾಲುಪಟ್ಟಿಯ ಪ್ರಕಾರ ಯಾರಿಗೆ ಎಷ್ಟು ಆಸ್ತಿಗಳು ಹೋಗಿದೆ ಎಂಬುದು ನೆನಪಿಲ್ಲ. ದಾಖಲೆ ತಯಾರಿಸುವ ಸಮಯದಲ್ಲಿ ಕೆಲವು ಸಾಕ್ಷಿದಾರರು ಬಂದಿದ್ದು, ದಾಖಲೆ ತಯಾರಿಸಿದ ನಂತರ ಕೆಲವು ಸಾಕ್ಷಿದಾರರು ಬಂದಿರುತ್ತಾರೆ. ಸಾಕ್ಷಿಗೆ ಎಡ ಅಂಗೈ ತೋರಿಸಲು ಸೂಚಿಸಿದ್ದು ಸಾಕ್ಷಿಯು ತನ್ನ ಎಡ ಅಂಗೈಯಲ್ಲಿ ದಾಖಲೆಯ ಮಾಹಿತಿಗಳನ್ನು ಬರೆದುಕೊಂಡಿರುವುದು ಕಂಡು ಬಂದಿರುತ್ತದೆ. 1,2 ನೇ ಪ್ರತಿವಾದಿ ಹಾಗೂ

ಮೃತ ಅಶೋಕ್ ರವರ ಹೇಳಿಕೆಯ ಮೇರೆಗೆ ದಾಖಲೆ ತಯಾರಿಸಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿಯವರು ದಾಖಲೆ ತಯಾರಿಸಲು ಯಾವುದೇ ಮಾಹಿತಿ ನೀಡಿಲ್ಲ ಹಾಗೂ ಸದರಿ ದಾಖಲೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಾಗೂ ಸಾಕ್ಷಿದಾರರೊಂದಿಗೆ ಸೇರಿ ತಾಲ್ಲೂಕು ಕಚೇರಿಯಲ್ಲಿಯೇ ನಿಡಿ-87 ದಾಖಲೆಯನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಆಸ್ತಿಗಳ ಹಂಚಿಕೆಯಾಗಿಲ್ಲ ಹಾಗೂ ಆ ಕುರಿತು ಯಾವುದೇ ಪಾಲುಪಟ್ಟಿ ಆಗಿಲ್ಲ ಎಂದರೆ ಸರಿಯಲ್ಲ. ಸೃಷ್ಟಿತ ದಾಖಲೆಯ ಆಧಾರದ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಪಕ್ಷಗಾರರಿಗೆ ಬೇರೆ ದಾಖಲೆ ಬರೆದುಕೊಟ್ಟ ಬಗ್ಗೆ ನೆನಪಿಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

2 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ